**CC 1837/2022**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ**
**ನ್ಯಾಯಾಲಯ, ಹೊಸಪೇಟೆ.**
**ಸಿಸಿ ನಂಬರ್** 1837/2022

**ಸಿ ಡಬ್ಲ್ಯೂ** 5
**ಪಿ ಡಬ್ಲ್ಯೂಃ** 3

| | |
|---|---|
| **ಸಾಕ್ಷಿಯ ಹೆಸರು -** | **ಲಿಂಗರಾಜ್** |
| **ತಂದೆಯ ಹೆಸರು -** | **ಹುಲುಗಪ್ಪ** |
| **ವಯಸ್ಸು -** | 42 **ವರ್ಷಗಳು** |
| **ಉದ್ಯೋಗ -** | **ಮುಖ್ಯ ಪೇದೆ, ಪಟ್ಟಣ ಪೋ.ಠಾ** |
| **ವಾಸಸ್ಥಳ -** | **ಹೊಸಪೇಟೆ** |

**ಸಾಕ್ಷಿಯನ್ನು ದಿನಾಂಕಃ** 11-09-2025 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ. ಪಿ. ಪಿ. ಅವರಿಂದ**

ನಾನು ದಿಃ **14-06-2017** ರಿಂದ ಇಲ್ಲಿಯವರೆಗೆ ಹೊಸಪೇಟೆ ಪಟ್ಟಣ ಪೋಲಿಸ್ ಠಾಣೆಯಲ್ಲಿ ಮುಖ್ಯ ಪೇದೆ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ **02-06-2022** ರಂದು ಬೆಳಿಗ್ಗೆ **07.40** ಗಂಟೆಗೆ ಚಾಸಾ **-10** ರವರು ಈ ಪ್ರಕರಣದಲ್ಲಿ ದಾಳಿ ಮಾಡುವುದಿದೆ ಎಂದು ನನಗೆ ತಿಳಿಸಿದ್ದರು. ನನಗೆ ಪಂಚರನ್ನು ಕರೆದುಕೊಂಡು ಬರಲು ತಿಳಿಸಿದ್ದರಿಂದ, ಚಾಸಾ **-2** ಮತ್ತು **3** ರವರನ್ನು ಕರೆದುಕೊಂಡು ಬಂದಿದ್ದೆ. ನಂತರ ಠಾಣೆಯಿಂದ ಮೀರಆಲಂ ಟಾಕೀಜ್ ಮಾರ್ಗವಾಗಿ ಬಾತ್ಮಿ ಬಂದ ಸ್ಥಳದ ಹತ್ತಿರ ಬೆಳಿಗ್ಗೆ **08.00** ಗಂಟೆಗೆ ಹೋಗಿರುತ್ತೇವೆ. ಸದರಿ ಸ್ಥಳದಲ್ಲಿ ನಿಂತು ನೋಡಿದಾಗ ಚಾಸಾ**-4** ರವರು ಅಲ್ಲಿ ಇದ್ದರು. ನಾವುಗಳು ಮರೆಮಾಚಿ ನೋಡಿದಾಗ ಒಬ್ಬ ವ್ಯಕ್ತಿ ಚೋಳ ವೈನ್ಸ ಪಕ್ಕದಲ್ಲಿ ಬಿಳಿ ಚೀಲದಲ್ಲಿದ್ದ ಮದ್ಯವನ್ನು ತೆಗೆದು ಸಾರ್ವಜನಿಕರಿಗೆ ಮಾರಾಟ ಮಾಡುತ್ತಿರುವುದು ಕಂಡು ಬಂದಿತ್ತು. ನಾವು ದಾಳಿ ಮಾಡಿ ಆ ವ್ಯಕ್ತಿಯನ್ನು ಹಿಡಿದು ವಿಚಾರಿಸಿದಾಗ ತನ್ನ ಹೆಸರನ್ನು ಹುಲುಗಪ್ಪ ತಂದೆ ಸಣ್ಣೆಕಪ್ಪ, ಸಾಃ ತಳವಾರಕೇರಿ, ಹೊಸಪೇಟೆ ಎಂದು ತಿಳಿಸಿದ. ಆತನ ಅಂಗಶೋಧನೆ ಮಾಡಿದಾಗ ರೂ. **1,200/-** ದೊರೆತವು.

ಆತನ ಬಳಿ ಇದ್ದ ಚೀಲ ಪರಿಶೀಲಿಸಿದಾಗ 2- ಬ್ಯಾಗ್ ಪೈಪರ್ ಮದ್ಯದ ಪ್ಯಾಕೇಟ್ , 90 ಎಂ ಎಲ್ ನ ಓಲ್ಡ ಮಾಂಕ್ ಮದ್ಯದ ಪ್ಯಾಕೇಟ್ ಗಳು , 90 ಎಂ ಎಲ್ ನ ಒರಿಜಿನಲ್ ಚಾಯ್ಸ ಮದ್ಯದ ಪ್ಯಾಕೇಟ್ ಗಳು ದೊರೆತವು. ಅವುಗಳನ್ನೆಲ್ಲಾ ಪಂಚರ ಸಮಕ್ಷಮ  ಜಪ್ತು ಪಡಿಸಿಕೊಳ್ಳಲಾಯಿತು. ಸದರಿ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿ ಸಹಿ ನೋಡಿ ಗುರುತಿಸಿದ್ದು, ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿಃ 2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿಃ 2 (ಡಿ) ಎಂದು ಗುರುತಿಸಲಾಯಿತು.

ಸಾಕ್ಷಿ ನಿಪಿಃ 3 ರಲ್ಲಿನ ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ನಾವು ಆ ದಿನ ಹಿಡಿದಿದ್ದ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಮು ಮಾ 1 ರಿಂದ 3 ನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎನ್ ಎಸ್ ಹೆಚ್., ವಕೀಲರಿಂದ**

ನನ್ನ ಹೇಳಿಕೆಯಲ್ಲಿ ನಾವು ಯಾವ ಯಾವ ವಾಹನಗಳಲ್ಲಿ ಸ್ಥಳಕ್ಕೆ ಹೋಗಿದ್ದೇವು ಎಂದು  ನೋಂದಣಿ ಸಂಖ್ಯೆಗಳನ್ನು ಬರೆಸಿರುವುದಿಲ್ಲ. ನಾವು ಕೃತ್ಯ ಸ್ಥಳಕ್ಕೆ ಹೋದಾಗ ಬೆಳಿಗ್ಗೆ 08.10 ಗಂಟೆ ಆಗಿತ್ತು. ನನ್ನ ಹೇಳಿಕೆಯಲ್ಲಿ ಚಾಸಾ -1 ರವರನ್ನು ಸ್ಥಳದಲ್ಲಿ ಬೆಳಿಗ್ಗೆ 08.10 ಗಂಟೆಗೆ ಮಾತನಾಡಿಸಿರುತ್ತೇನೆ ಎಂದು ಹೇಳಿ ಬರೆಸಿರುತ್ತೇನೆ. ಎಷ್ಟು ಅಂತರದಿಂದ ಕೃತ್ಯ ಸ್ಥಳ ನೋಡಿರುತ್ತೇವೆ ಎಂದು ಹೇಳಿಕೆಯಲ್ಲಿ ಬರೆಸಿರುವುದಿಲ್ಲ. ಅಂಗಶೋಧನೆಯನ್ನು ಯಾರು ಮತ್ತು ಆರೋಪಿಯ ವಸ್ತ್ರದ ಯಾವ ಭಾಗವನ್ನು ಅಂಗಶೋಧನೆ ಮಾಡಲಾಯಿತು ಎಂಬ ಬಗ್ಗೆ ಹೇಳಿಕೆಯಲ್ಲಿ ಬರೆಸಿಲ್ಲ. ನನ್ನ ಹೇಳಿಕೆಯಲ್ಲಿ ಟೆಟ್ರಾ ಪ್ಯಾಕ್ ಗಳ ಬ್ಯಾಚ್ ನಂಬರ್ ಗಳನ್ನು ಬರೆಸಿರುವುದಿಲ್ಲ.

**CC 1837/2022**

**ಸಿ ಡಬ್ಲೂ 5**

**ಪಿ ಡಬ್ಲೂ: 3**

ಆ ದಿನ ಕೃತ್ಯ ಸ್ಥಳಕ್ಕೆ ಹೋಗಿಲ್ಲ, ಚಾಸಾ -10 ರವರು ನನಗೆ ಯಾವುದೇ ಮಾಹಿತಿ ನೀಡಿರಲಿಲ್ಲ, ನಾನು ಚಾಸಾ -2 ಮತ್ತು 3 ರವರನ್ನು ಕರೆದುಕೊಂಡು ಬಂದಿರಲಿಲ್ಲ ಅಂದರೆ ಸರಿಯಲ್ಲ. ಪಂಚರನ್ನು ಎಲ್ಲಿಂದ ಕರೆದುಕೊಂಡು ಬಂದೆ ಎಂದು ಹೇಳಿಕೆಯಲ್ಲಿ ಬರೆಸಿಲ್ಲ. ಆರೋಪಿ ಸ್ಥಳದಲ್ಲಿ ಇರಲಿಲ್ಲ ಮತ್ತು ಯಾವುದೇ ಮದ್ಯದ ಪ್ಯಾಕೇಟ್ ಗಳನ್ನು ತನ್ನ ತಾಬಾದಲ್ಲಿ ಇಟ್ಟುಕೊಂಡಿರಲಿಲ್ಲ ಅಂದರೆ ಸರಿಯಲ್ಲ. ನಾವುಗಳು ದಾಳಿ ಮಾಡಿ ಆತನನ್ನು ಹಿಡಿದು ಪಂಚನಾಮೆ ಮಾಡಿ ಮು ಮಾ ಗಳನ್ನು ವಶಪಡಿಸಿಕೊಂಡೆವು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ಆರೋಪಿ ಯಾವುದೇ ಕೃತ್ಯ ಎಸಗದಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ- ಇಲ್ಲ**.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.